

# ಓಟದ ಚಾಂಪಿಯನ್ ಗುಡುಗಾಡು

**ಗುಡುಗಾಡು ಹಕ್ಕಿಗಳಲ್ಲಿ ಬಹುಪತಿತ್ವ ರೂಢಿಯಲ್ಲಿದೆ. ಮೊಟ್ಟೆಯಿಟ್ಟ ಹೆಣ್ಣು ಮತ್ತೊಂದು ಗಂಡನ್ನು ಅರಸಿ ಹೊರಟರೆ, ಗಂಡು ಹಕ್ಕಿ, ಮೊಟ್ಟೆಗೆ ಕಾವು ನೀಡಿ ಮರಿ ಮಾಡುತ್ತದೆ.**

■ **ಶಶಿಧರಸ್ವಾಮಿ ಆರ್. ಹಿರೇಮಠ**

ಅದು ದರೋಜಿ ಕರಡಿಧಾಮದ ಹೊರವಲಯದ ಕುರುಚಲು ಕಾಡು. ಇಳಿಸಂಜೆ ಸಮಯ. ಬಣ್ಣದ ಗೌಜಲ ಹಕ್ಕಿಗಳ ಫೋಟೊ ತೆಗೆಯಲೆಂದು ಹೊರಟಿದ್ದೆವು. ಛದ್ಮವೇಷಧಾರಿಗಳಂತೆ, ನೆಲದ ಮೇಲೆ ಇದ್ದರೂ ಇಲ್ಲದಂತೆ ಕುಳಿತುಕೊಳ್ಳುವ ಈ ಹಕ್ಕಿಯ ತಲಾಶಿನಲ್ಲಿದ್ದೆವು.

ದಾರಿಯಲ್ಲಿ ಹೋಗುತ್ತಲೇ, ಹಕ್ಕಿಯೊಂದು ಕಣ್ಣಿಗೆ ಬಿತ್ತು. ತಕ್ಷಣವೇ ಫೋಟೊ ತೆಗೆಯಲು ಆರಂಭಿಸಿದೆ. ಬಲು ನಾಚಿಕೆ ಸ್ವಭಾವ ಇದರದ್ದಾದರೂ, ಒಮ್ಮೆ ಇತ್ತ ನೋಡಿ ಚೂಂವ್‌ಗುಟ್ಟಿ ಅತ್ತಿತ್ತ ತಿರುಗುನೋಟದ ಒಂದು ಪೋಸ್ ಕೊಟ್ಟು, 'ಫೋಟೊ ಸಾಕು, ನಾನ್ನಿನ್ನು ಹೊರಡುವೆ' ಎನ್ನುವಂತೆ ಹತ್ತಿರವಿದ್ದ ಪೊದೆಗೆ ಓಡಿತು.

ಈ ಹಕ್ಕಿಯನ್ನು 'ಗುಡುಗಾಡು ಹಕ್ಕಿ' ಎಂದು ಕರೆಯುತ್ತಾರೆ. ಕೆಲ ಕಡೆಗಳಲ್ಲಿ 'ಕರೆಚಕ್ಕೆ' ಎಂದೂ, ರೈತಾಪಿ ಜನರು ಗ್ರಾಮ್ಯಭಾಷೆಯಲ್ಲಿ 'ಚಿಟಬುರ್ಲಿ' ಎಂದು ಕರೆಯುವುದುಂಟು. ಇಂಗ್ಲಿಷ್‌ನಲ್ಲಿ ಬಾರ್ಡ್ ಬಟನ್‌ಕ್ವಿಲ್ (Barred Buttonquail) ಅಥವಾ ಕಾಮನ್ ಬಸ್ಟರ್ಡ್–ಕ್ವೆಲ್ (Common BustardQuail) ಎಂದು ಹೆಸರು. ವೈಜ್ಞಾನಿಕವಾಗಿ ಟರ್ನಿಕ್ಸ್ ಸುಸ್ಕಿಟೇಟರ್ (Turnix suscitator) ಎಂದು ಹೆಸರಿಸಿದ್ದಾರೆ. ಚರಾಡ್ರಿಫಾರ್ಮಿಸ್ (Charadriiformes) ಗಣದ, ಟರ್ನಿಸಿಡೆ (Turnicidae) ಕುಟುಂಬಕ್ಕೆ ಇದು ಸೇರಿದೆ.

ಗುಬ್ಬಚ್ಚಿಗಿಂತ ಸ್ವಲ್ಪ ದೊಡ್ಡದಾಗಿ, 15 ಸೆಂ.ಮೀ. ಗಾತ್ರದ ಕಂದುವರ್ಣದ ಪುಟ್ಟ ನೆಲವಾಸಿ ಹಕ್ಕಿಯಿದು. ಬೂದು ನೆತ್ತಿ, ಕಂದಾದ ಕತ್ತು, ಬೂದು ರೆಕ್ಕೆಗಳಲ್ಲಿನ ಕಪ್ಪು ಚುಕ್ಕೆಗಳು, ಸಣ್ಣ ಕಪ್ಪು ಕೊಕ್ಕು, ಬಿಳಿ ಸೋಗೆ ಹೊಂದಿರುವ ಕಣ್ಣುಗಳು. ಗಿಡ್ಡದಾದ ಕಪ್ಪು ಕಾಲುಗಳು, ಮೊಂಡಾದ ಬಾಲ ಇವುಗಳದ್ದು. ಹೆಣ್ಣು ಹಕ್ಕಿಯದ್ದು ಹೆಚ್ಚು ಹೊಳೆವ ಬಣ್ಣ. ಹೆಣ್ಣು ಹಕ್ಕಿಗೆ ಕಂಠದಿಂದ ಎದೆ ಭಾಗದವರೆಗೆ ಕಪ್ಪಾದ ಪಟ್ಟಿ ಇದೆ. ಗಂಡು ಹಕ್ಕಿಗೆ ಈ ಪಟ್ಟಿ ಇಲ್ಲ. ಎದೆ ಭಾಗ ಹಾಗೂ ಪಕ್ಕೆಬದಿ ಮಾಸಲು ಬಿಳಿಯ ಕಪ್ಪಾದ ಗೆರೆಗಳಿವೆ.

ಕುರುಚಲು ಕಾಡು, ಹೊಲಗಳು, ಅರಣ್ಯದಂಚು ಮತ್ತು ಕೃಷಿಭೂಮಿಯಲ್ಲಿ ದಟ್ಟವಾದ ಹುಲ್ಲು, ಕಳೆ ಸಸ್ಯಗಳಲ್ಲಿ ಅದೃಶ್ಯವಾಗಿ ಅಲೆದಾಡುವ ಇವುಗಳನ್ನು ಪತ್ತೆಹಚ್ಚುವುದು ಕಷ್ಟಕರ. ಗಟ್ಟಿಯಾದ ಗಿಡ್ಡ ಕಾಲು, ಗಿಡ್ಡಾದ ರೆಕ್ಕೆಗಳಿದ್ದು, ಬಹುದೂರದವರೆಗೆ ಹಾರುವ ಸಾಮರ್ಥ್ಯ ಇವಕ್ಕಿಲ್ಲ. ಆದರೆ ಇವು ಅತ್ಯುತ್ತಮ ಓಟಗಾರ ಹಕ್ಕಿಗಳು. ಇವುಗಳ ಕೂಗು ಮೋಟಾರ್ ಸೈಕಲ್ ತರಹ. ಕೆಲ ಬಾರಿ ಜೋರಾಗಿ ಹೂನ್–ಹೂನ್–ಹೂನ್ ಎಂದು ಕೂಗುತ್ತವೆ.

ಹೆಣ್ಣು ಹಕ್ಕಿ ಬಣ್ಣ ಮತ್ತು ಗಾತ್ರದಲ್ಲಿ ಗಂಡಿಗಿಂತ ಸುಂದರ. ಹೊಳೆವ ಮೈ ಬಣ್ಣದಿಂದ ಪ್ರಣಯಾಸಕ್ತಿ ವ್ಯಕ್ತಪಡಿಸಿ ಗಂಡಿನ ಸುತ್ತ ಸುತ್ತುತ್ತಾ ಮೆಲುದನಿಯಲ್ಲಿ ಸ್ವರ ಹೊರಡಿಸುತ್ತದೆ. ಪೊದೆಗಳಲ್ಲಿ ನೆಲವನ್ನು ಕೆದರಿ ಸುತ್ತಲೂ ಹುಲ್ಲಿನ ಅಂಚಿರುವ ಗೂಡು ರಚಿಸಿ, ಸಂತಾನಾಭಿವೃದ್ಧಿಗೆ ಅಣಿಯಾಗುತ್ತದೆ. ಗಂಡನ್ನು ವಶಪಡಿಸಿಕೊಳ್ಳಲು ಇತರ ಹೆಣ್ಣುಗಳೊಂದಿಗೆ ಹೋರಾಡಿ, ಪ್ರತಿಸ್ಪರ್ಧಿ ಹೆಣ್ಣುಹಕ್ಕಿಗಳಿಗೆ ಸವಾಲಾಗಿ ಡ್ರ ರ ರ, ಡ್ರ ರ ರ



ಎಂದು ಎತ್ತರದ ದನಿಯಲ್ಲಿ ಕೂಗುತ್ತಾ, ಇತರೆ ಹೆಣ್ಣುಗಳನ್ನು ಓಡಿಸಿ ಜಯಭೇರಿ ಪಡೆದು ಗಂಡಿನ ಸಂಯೋಗಕ್ಕಾಗಿ ತನ್ನನ್ನು ಅರ್ಪಿಸಿಕೊಳ್ಳುತ್ತದೆ.

ಗಂಡಿನೊಂದಿಗೆ ಮಿಲನಕ್ರಿಯೆ ನಡೆಸಿದ ನಂತರ ಈಗಾಗಲೇ ನಿರ್ಮಾಣವಾದ ಗೂಡಿನಲ್ಲಿ ಕಂದು ಚುಕ್ಕೆಗಳಿರುವ ಬೂದು ಮಿಶ್ರಿತ ಬಿಳಿ ಬಣ್ಣದ ಮೂರ್ನಾಲ್ಕು ಮೊಟ್ಟೆಗಳನ್ನಿಡುತ್ತದೆ. ಆದರೆ ಗಂಡು ಹಕ್ಕಿಗಾಗಿ ಇಷ್ಟೆಲ್ಲಾ ಸೆಣಸಾಡುವ ಹೆಣ್ಣು, ಮೊಟ್ಟೆ ಇಡುತ್ತಿದ್ದಂತೆ, ಆ ಗಂಡಿಗೆ ಸಾಂಸಾರಿಕ ಹೊಣೆ ನೀಡಿ, ಮತ್ತೊಬ್ಬ ಸಂಗಾತಿಯನ್ನು ಹುಡುಕಿಕೊಂಡು ಹೊರಟುಬಿಡುತ್ತದೆ. ಈ ಹೆಣ್ಣುಹಕ್ಕಿಗಳದ್ದು 'ಬಹುಪತಿತ್ವ'.

ಪಕ್ಷಿ ಸಂಕುಲದಲ್ಲಿ, ಮರಿಗಳ ಪೋಷಣೆಯಲ್ಲಿ ತಂದೆ–ತಾಯಿಗಳದ್ದು ಸಮಪಾಲು. ಆದರೆ, ಗುಡುಗಾಡು ಹಕ್ಕಿಗಳ ಜೀವನ ರೀತಿಯೇ ಬೇರೆ. ಇಲ್ಲಿ ಮಕ್ಕಳ ಜವಾಬ್ದಾರಿ ಏನಿದ್ದರೂ ಗಂಡುಹಕ್ಕಿ ಹೆಗಲ ಮೇಲಷ್ಟೆ. ಮೊಟ್ಟೆಯಿಡುತ್ತಿದ್ದಂತೆ ಮತ್ತೊಂದು ಸಂಗಾತಿ ಹುಡುಕಿ ಹೊರಟುಬಿಡುವುದು ಹೆಣ್ಣಿಗೆ ಸಲೀಸು. ಮೊಟ್ಟೆಗಳಿಗೆ ಕಾವು ಕೊಟ್ಟು, ಮರಿಗಳಾದ ಮೇಲೆ ಅವುಗಳಿಗೆ ಜೀವನಪಾಠ ಕಲಿಸುವುದು ಅಪ್ಪನ ಹೊಣೆ.

ಬಹು ಗಂಡು ಹಕ್ಕಿಗಳೊಂದಿಗೆ ಮಿಲನಕೂಟ ನಡೆಸುವ ಸಾಮರ್ಥ್ಯ ಅಂದಗಾತಿ ಹೆಣ್ಣು ಹಕ್ಕಿಯದ್ದು. ಒಂದು, ಇನ್ನೊಂದು, ಮಗದೊಂದು... ಹೀಗೆ ವರ್ಷವಿಡೀ ಬೇರೆಬೇರೆ ಗಂಡಿನೊಂದಿಗೆ ಬೆರೆತು ನಿರಂತರ ಸಂತಾನೋತ್ಪತ್ತಿಯಲ್ಲಿ ತೊಡಗಿರುತ್ತದೆ.

ಗಂಡು ಒಬ್ಬಂಟಿಯಾಗಿ ಮೊಟ್ಟೆಗಳಿಗೆ ಕಾವು ನೀಡಿ ಮರಿ ಮಾಡುತ್ತದೆ. ಅಪ್ಪನ ಸಹಾಯದಿಂದ ಮೊಟ್ಟೆಯಿಂದ ಹೊರಬಂದ ಪುಟ್ಟ ಹಕ್ಕಿಗಳು ತಕ್ಷಣವೇ ಓಡಾಡಲು ಆರಂಭಿಸುತ್ತವೆ. ಹೆತ್ತಮ್ಮನಿಲ್ಲದ ಮರಿಗಳಿಗೆ ಅಪ್ಪನೇ ಆಹಾರ ನೀಡಿ ಪೋಷಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in